ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

## ಸಿ.ಸಿ.ನಂಃ 1831/25

ಪಿಡಬ್ಲ್ಯುಃ – 2

ಸಿಡಬ್ಲ್ಯುಃ – 2

ದಿನಾಂಕಃ 16.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಪ್ರವೀಣ್ |
| ತಂದೆಯ ಹೆಸರು | – ರಘು ಕೆ. ಎಂ. |
| ವಯಸ್ಸು | – 39 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಬೆಟ್ಟತ್ತೂರು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 9, 10 ಹಾಗೂ ಮೃತ ಶರತ್ ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ದಿಃ 27.03.2025 ರಂದು ನಾನು ಸಂಪಾಜೆ ಕಡೆಯಿಂದ ಮಡಿಕೇರಿ ಕಡೆಗೆ ನನ್ನ ದ್ವಿ ಚಕ್ರ ವಾಹನದಲ್ಲಿ ಮದ್ಯಾಹ್ನ ಸುಮಾರು 3.15 ಗಂಟೆಯಲ್ಲಿ ಬರುತ್ತಿದ್ದೆ. ಆಗ ಕಾಟಕೇರಿಯ ಪ್ರಶಾಂತಿ ನಿಲಯದ ಮುಂದೆ ಸಂಪಾಜೆ–ಮಡಿಕೇರಿ ರಸ್ತೆಯಲ್ಲಿ ನನ್ನ ಮುಂದೆ ಶರತ್ ಅವರ ಬಾಪ್ತು ಹೋಂಡಾ ಹಾರ್ನೆಟ್ ಬೈಕ್ ನಲ್ಲಿ ಹೋಗುತ್ತಿದ್ದರು. ಶರತ್ ಚಾಲನೆ ಮಾಡುತ್ತಿದ್ದ ಬೈಕಿನ ಮುಂದೆ ಒಂದು ಮಹೀಂದ್ರ ವೆರಿಟೋ ಕಾರು ಹೋಗುತ್ತಿತ್ತು, ಅದರ ಸಂಖ್ಯೆ ನನಗೆ ಗೊತ್ತಿಲ್ಲ. ಆಗ ಎದುರುಗಡೆಯಿಂದ ಒಂದು ಲಾರಿ ಬರುತ್ತಿತ್ತು. ಸದರಿ ಮಹೀಂದ್ರ ವೆರಿಟೋ ಕಾರಿನ ಚಾಲಕ ಅಚಾನಕ್ಕಾಗಿ ಬ್ರೇಕ್ ಹಾಕಿದ್ದರಿಂದ ಶರತ್ ಚಾಲನೆ ಮಾಡುತ್ತಿದ್ದ ದ್ವಿ ಚಕ್ರ ವಾಹನ ಅಚಾನಕ್ ಆಗಿ ಸದರಿ ಕಾರಿನ ಹಿಂಭಾಗಕ್ಕೆ ತಾಗಿದ್ದು, ಶರತ್ ರಸ್ತೆಯ ಬಲ ಬದಿಗೆ ವಾಹನ ಸಮೇತ ಬಿದ್ದಿರುತ್ತಾನೆ, ಆಗ ಎದುರಿನಿಂದ ಬರುತ್ತಿದ್ದ ಲಾರಿ ಶರತ್ ನ ತಲೆಯ ಮೇಲೆ ಚಕ್ರ ಹರಿಸಿ ಹೋಗಿರುತ್ತದೆ. ನಾನು ಕೂಡಲೇ ಸ್ಥಳಕ್ಕೆ ಹೋಗಿ ನೋಡಿ ಶರತ್ ಗೆ ಅಪಘಾತ ಆದ ವಿಚಾರವನ್ನು ಚಾಸಾ–1 ರವರಿಗೆ ತಿಳಿಸಿರುತ್ತೇನೆ. ಯಾವುದೋ ಒಂದು

ವಾಹನದಲ್ಲಿ ಅಪಘಾತಕ್ಕೆ ಈಡಾಗಿದ್ದ ಶರತ್ ನನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ದಿಃ 29.03.2025 ರಂದು ಪೊಲೀಸರು ನನ್ನನ್ನು ಸ್ಥಳ ಮಹಜರು ಗೆ ಪಂಚರಾಗಿ ಬರಲು ತಿಳಿಸಿದ್ದು, ಅದರಂತೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಪೊಲೀಸರು ನನ್ನ ಹಾಗೂ ಚಾಸಾ-9 ಮತ್ತು 10 ರವರ ಸಮಕ್ಷಮ ನಾನು ಘಟನಾ ಸ್ಥಳ ತೋರಿದ ಮೇರೆಗೆ ಪೊಲೀಸರು ಸ್ಥಳ ಮಹಜರು ಮಾಡಿರುತ್ತಾರೆ. ಸದರಿ ಮಹಜರನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಪೊಲೀಸರು ಶರತ್‌ನ ಚಪ್ಪಲಿ, ಹೆಲ್ಮೆಟ್, ಹೆಲ್ಮೆಟ್ ಗ್ಲಾಸನ್ನು, ವೆರಿಟೋ ಕಾರಿನ ಬ್ರೇಕ್ ಲೈಟನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಹೆಲ್ಮೆಟ್, ಹೆಲ್ಮೆಟ್ ಗ್ಲಾಸನ್ನು, ಚಪ್ಪಲಿಯನ್ನು ಈಗಾಗಲೇ ಮು. ಮಾ. 1 ರಿಂದ 3ಎಂದು ಗುರುತಿಸಲಾಗಿದೆ. ವೆರಿಟೋ ಕಾರಿನ ಬ್ರೇಕ್ ಲೈಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮು. ಮಾ. 4 ಎಂದು ಗುರುತಿಸಲಾಯಿತು.

ನಿಪಿ-2 ಮಹಜರನ್ನು ಪೊಲೀಸರು ಮಃ1.30 ರಿಂದ 2.30 ಗಂಟೆಯವರೆಗೆ ಬರೆದಿರುತ್ತಾರೆ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು.

ಘಟನಾ ಸ್ಥಳದಲ್ಲಿ ಪೊಲೀಸರು ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ಬರೆದಿರುತ್ತಾರೆ. ಸದರಿ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಅಮಾನತ್ತು ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹಾಗೂ ಚಾಸಾ-9 ಮತ್ತು 10 ರವರ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಅಪಘಾತಕ್ಕೀಡಾದ ಶರತ್ ಬೈಕ್, ಅಪಘಾತ ಪಡಿಸಿದ ಲಾರಿ, ವೆರಿಟೋ ಕಾರನ್ನು ಪೊಲೀಸರು ಮುಂದಿನ ತನಿಖೆಗೆಂದು

ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡರು. ಅಮಾನತ್ತು ಪಂಚನಾಮೆಯನ್ನು ಪೊಲೀಸರು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ. ಸ್ಥಳ ಮಹಜರು ಮಾಡುವ ಕಾಲಕ್ಕೆ ಪೊಲೀಸರು 6 ಫೊಟೋಗಳನ್ನು ತೆಗೆದಿದ್ದು, ಅವುಗಳನ್ನು ಸಾಕ್ಷಿ ನೋಡಿದರೆ ಗುರುತಿಸುತ್ತೇನೆ ಎಂದು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ– 5 ರಿಂದ ನಿಪಿ–10 ಎಂದು ಗುರುತಿಸಲಾಯಿತು. ಪೊಲೀಸರು ಅಮಾನತ್ತು ಮಹಜರು ಮಾಡುವಾಗ 6 ಫೊಟೋಗಳನ್ನು ತೆಗೆದಿದ್ದು, ಅವುಗಳನ್ನು ಸಾಕ್ಷಿ ನೋಡಿದರೆ ಗುರುತಿಸುತ್ತೇನೆ ಎಂದು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ– 11 ರಿಂದ ನಿಪಿ–16 ಎಂದು ಗುರುತಿಸಲಾಯಿತು. ಅಪಘಾತ ಪಡಿಸಿದ ಲಾರಿ, ಕಾರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ– 15 ಮತ್ತು 16(ಲಾರಿ) ಹಾಗೂ ನಿಪಿ–13 ಮತ್ತುನಿಪಿ–14(ಕಾರು) ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅಪಘಾತಕ್ಕೆ ಈಡಾದ ಶರತ್ ಚಾಲನೆ ಮಾಡುತ್ತಿದ್ದ ಬೈಕನ್ನು ನೋಡಿದರೆ ಗುರುತಿಸುತ್ೆೇನೆ ಎಂದು ಸಾಕ್ಷಿನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–11 ಮತ್ತು 12 ಎಂದು ಗುರುತಿಸಲಾಗಿದೆ. ಈ ಅಪಘಾತ ಆಗಲು ಕಾರಣ ಶರತ್‌ನ ದ್ವಿಚಕ್ರನ ವಾಹನದ ಮುಂದೆ ಹೋಗುತ್ತಿದ್ದ ಕಾರು ಸಡನ್ ಆಗಿ ಬ್ರೇಕ್ ಹಾಕಿದ್ದರಿಂದ ಶರತ್ ನ ದ್ವಿ ಚಕ್ರ ವಾಹನ ಅದಕ್ಕೆ ತಾಗಿ ಈ ಅಪಘಾತ ಆಗಿರುತ್ತದೆ ಹಾಗೂ ಎದುರುನಿಂದ ಬರುತ್ತಿದ್ದ ಲಾರಿ ಅಜಾಗರೂಕತೆಯಿಂದ ಗಮನಿಸದೆ ಅಪಘಾತ ಪಡಿಸಿರುತ್ತದೆ. ಸದರಿ ಕಾರಿನ ಚಾಲಕ ಹಾಗೂ ಲಾರಿಯ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಕಲಾಪಕ್ಕೆ ಆರೋಪಿಗಳು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಇಪಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿಯನ್ನು ಗುರುತಿಸಲು ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ – 1 ಮತ್ತು 2ನೇ ಆರೋಪಿತರ ಪರ ವಕೀಲರಾದ ಶ್ರೀ.ಸಿ ಎ ಪಿ ಮತ್ತು ಶ್ರೀ. ಎನ್ ಎಸ್ ಎಸ್ ರವರಿಂದಃ–

ಬೆಟ್ಟತ್ತೂರು ಗ್ರಾಮದಿಂದ ಅಪಘಾತ ಸ್ಥಳಕ್ಕೆ ಸುಮೂರು 12 ರಿಂದ 13 ಕಿ. ಮಿ ಆಗುತ್ತದೆ. ನಾನು ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ನಾನು ಯಾವ ವಾಹನದಲ್ಲಿ ಬರುತ್ತಿದ್ದೆ ಎಂದು ಹೇಳಿಲ್ಲ ಎಂದರೆ ಸರಿ. ಪೊಲೀಸರು ನನಗೆ ಮಹಜರಿಗೆ ಹಾಜರಾಗಲು ನೋಟಿಸ್ ನೀಡಿಲ್ಲ, ಆದರೆ ಫೋನ್ ಮಾಡಿ ಕರೆದಿರುತ್ತಾರೆ. ಮಡಿಕೇರಿ –ಮಂಗಳೂರು ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾನು ದಿಃ29.03.2025ರಂದು ಮಹಜರಿಗೆ ಘಟನಾ ಸ್ಥಳಕ್ಕೆ

ಹೋದಾಗ ಅಲ್ಲಿ ವಾಹನಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೊಲೀಸರು ವಾಹನಗಳನ್ನು ಅಮಾನತ್ತು ಮಾಡಿಕೊಂಡು ಪೊಲೀಸ್ ಠಾಣೆಗೆ ತಂದಿರುತ್ತಾರೆ. ಮಂಗಳೂರು–ಮಡಿಕೇರಿ ರಸ್ತೆಯ ಮಧ್ಯೆ ಬಿಳಿ ಪಟ್ಟೆಯ ಡಿವೈಡರ್ ಹಾಕಿದ್ದಾರೆ ಎಂದರೆ ಸರಿ. ಲಾರಿಯ ಬಲ ಭಾಗದ ಟಯರ್ ಸದರಿ ರಸ್ತೆಯ ಉತ್ತರಕ್ಕೆ ಎಷ್ಟು ಅಡಿಗೆ ಬಂದಿತ್ತು ಎಂದರೆ ಶರತ್ ಕಾರಿಗೆ ಟಚ್ ಆಗಿ ಡಿವೈಡರ್ ನ ವೈಟ್ ಪಟ್ಟೆಯ ಒಳಗೆ ಬಿದ್ದಿರುತ್ತಾನೆ ಆಗ ಎದುರಿನಿಂದ ಲಾರಿ ಬಂದು ಅವನ ಮೇಲೆ ಹತ್ತಿಸಿ ಕೊಂಡು ಹೋಗಿರುತ್ತದೆ. ಅಪಘಾತ ಪಡಿಸಿದ ಲಾರಿ 12 ಚಕ್ರದ ಲಾರಿ ಎಂದರೆ ಸರಿ. ಸದರಿ ಲಾರಿಗೆ 12 ಟಯರ್ ಇದೆ ಎಂದರೆ ಸರಿ. ನಾನು ನನ್ನ ದ್ವಿ ಚಕ್ರ ವಾಹನದಲ್ಲಿ ಬರುತ್ತಿದ್ದಾಗ ನನ್ನಿಂದ ಸುಮಾರು 10 ಅಡಿ ದೂರನಲ್ಲಿ ಶರತ್ ಗೆ ಅಪಘಾತ ಆಗಿರುತ್ತದೆ. ಸಂಪಾಜೆಯಿಂದ ಮಡಿಕೇರಿಗೆ ಬರುವ ರಸ್ತೆಯಲ್ಲಿರುವ ಅಪಘಾತದ ಸ್ಥಳ ಇಳಿಜಾರಾಗಿದೆ ಎಂದರೆ ಸರಿಯಲ್ಲ. ದಿಃ 29.03.2025 ರಂದು ನೀವು ಘಟನಾ ಸ್ಥಳಕ್ಕೆ ಹೋದಾಗ ಕಾರಿನ ಬಲ ಭಾಗದ ಟಯರ್ ಉತ್ತರದಿಂದ ದಕ್ಷಿಣಕ್ಕೆ ಎಷ್ಟು ದೂರದಲ್ಲಿ ಇತ್ತು ಎಂದರೆ ಒಂದು ಮೂರು ಅಡಿ ಅಂತರದಲ್ಲಿ ಇರಬಹುದು. ಅಪಘಾತ ಆದ ರಸ್ತೆಯ ಅಗಲ ಸುಮಾರು 10 ಅಡಿ ಇರುತ್ತದೆ. ಟಯರ್ ಗುರುತುಗಳ ಬಗ್ಗೆ ಸ್ಥಳ ಮಹಜರಿನಲ್ಲಿ ನಮೂದು ಮಾಡಿದ್ದಾರೆ. ನೀವು ಅಪಘಾತದ ದಿನದಂದು ಅಪಘಾತ ಸ್ಥಳದಿಂದ ಸುಮಾರು 10 ಅಡಿ ದೂರದಲ್ಲಿ ಇದ್ದೆ ಎಂದು ಹೇಳುತ್ತಿದ್ದೀರಿ, ಕಾರಿನಿಂದ ನೀವು ಎಷ್ಟು ದೂರದಲ್ಲಿ ಇದ್ದಿರಿ ಎಂದರೆ ಸಾಕ್ಷಿಯು ಸುಮಾರು 15 ಅಡಿ ದೂರದಲ್ಲಿ ಇದ್ದೆ ಎನ್ನುತ್ತಾರೆ. ಅಪಘಾತ ಪಡಿಸಿದ ಲಾರಿ ಸುಮಾರು 38 ಅಡಿ ಉದ್ದ ಇದೆ ಎಂದರೆ ಅಂದಾಜು ಇರಬಹುದು. ಶರತ್ ಚಾಲನೆ ಮಾಡುತ್ತಿದ್ದ ಬೈಕ್ ಲಾರಿಯ ಮುಂಭಾಗ ದಾಟಿ ಲಾರಿಯ ಹಿಂದಿನ ಚಕ್ರಕ್ಕೆ ಶರತ್ ಬಿದ್ದಿರುತ್ತಾರೆ ಎಂದರೆ ಸರಿ. ಲಾರಿಯ ಎಷ್ಟನೇ ಚಕ್ರಕ್ಕೆ ಕಾರು ಬಂದಿತ್ತು ಎಂದರೆ ಸಾಕ್ಷಿಯು ಕೊನೆಯ ಚಕ್ರಕ್ಕೆ ಬಂದಿತ್ತು ಎನ್ನುತ್ತಾರೆ. ಸದರಿ ಕಾರು ಮತ್ತು ಲಾರಿಯ ನಡುವೆ ಜಾಗ ಎಷ್ಟಿತ್ತು ಎಂದರೆ ಅಂದಾಜು 2 ಅಡಿ ಇತ್ತು. ಆ ಎರಡು ಅಡಿ ಜಾಗದಲ್ಲಿ ಶರತ್ ತನ್ನ ಬೈಕನ್ನು ತೆಗೆದುಕೊಂಡು ಹೋಗಬಹುದೋ ಇಲ್ಲವೋ ಎಂದು ಯೋಚನೆ ಮಾಡಲು ಅವನಿಗೆ ಟೈಮ್ ಇತ್ತು ಎಂದರೆ ಸರಿಯಲ್ಲ. ಅಪಘಾತ ರಸ್ತೆಯ ಎರಡೂ ಬದಿಗಳಲ್ಲಿ ಕಾಫಿ ತೋಟ ಇದೆ ಎಂದರೆ ಸರಿ. ಮಡಿಕೇರಿಯಿಂದ ಹೋಗುವಾಗ ಉತ್ತರದ ಕಡೆಗೆ ಪ್ರಶಾಂತ್ ಹೋಂ ಸ್ಟೇ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಲ ಭಾಗಕ್ಕೆ ಇರುತ್ತದೆ ಎನ್ನುತ್ತಾರೆ. ಸದರಿ ರಸ್ತೆಯ ಬಲ ಭಾಗದಲ್ಲಿ ಎಲ್ಲೋ ಗೇಟ್ ಎನ್ನುವ ಕಾಫಿ ಶಾಪ್ ಇರುತ್ತದೆ ಎಂದರೆ ಸರಿ. ಸದರಿ ಕಾಫಿ ಶಾಪಿನ ಬಳಿ ಸುಮಾರು ಗ್ರಾಹಕರು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತದ ಸ್ಥಳದ ಸ್ವಲ್ಪ ಮುಂದೆ ಸದರಿ ಕಾಫಿ ಶಾಪ್ ಇರುತ್ತದೆ. ಅಪಘಾತ ಸ್ಥಳದಿಂದ ಎಲ್ಲೋ ಗೇಟ್ ಕಾಫಿ ಶಾಪ್ 15 ರಿಂದ 20 ಅಡಿ ದೂರದಲ್ಲಿ ಇದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಕಾಫಿ ಶಾಪ್ ಆದ

ಮೇಲೆ ಮುಂದಕ್ಕೆ ತಿರುವು ಇದೆ ಎನ್ನುತ್ತಾರೆ. ಅಪಘಾತ ಆದ ಸ್ಥಳದಲ್ಲಿ ರಸ್ತೆಯು ಏರು ಗತಿಯಲ್ಲಿ ಇದೆ ಎಂದರೆ ಸರಿಯಲ್ಲ. ಮೃತ ಶರತ್ ಆ ಎರಡು ಅಡಿ ಅಗಲದ ರಸ್ತೆಯಲ್ಲಿ ಕಾರು ಮತ್ತು ಲಾರಿಯ ಮಧ್ಯೆ ಪಾನ ಮತ್ತನಾಗಿ, ವಾಹನ ಚಾಲನೆ ಗೊತ್ತಿಲ್ಲದೆ ಬೈಕ್ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಶರತ್ ಕಾರಿನ ಬಲ ಭಾಗಕ್ಕೆ ಗುದ್ದಿ, ಲಾರಿಯ ಹಿಂಭಾಗಕ್ಕೆ ಹೋಗಿ ಬಿದ್ದು, ತಾನೇ ಅಪಘಾತ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ–2 ಕ್ಕೆ ನಾನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–2 ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ–2ನ್ನು ಬರೆಯುವ ಕಾಲಕ್ಕೆ ಅಪಘಾತದಲ್ಲಿ ಭಾಗಿಯಾಗಿದ್ದ ಮೂರು ವಾಹನಗಳನ್ನು ಠಾಣೆಗೆ ತರಲಾಯಿತು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ, ಅಪಘಾತವನ್ನು ನೋಡಿಲ್ಲ, ಪೊಲೀಸರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆಗಲು ಕಾರಣ ಮೃತ ಶರತ್ ಮದ್ಯಪಾನ ಮಾಡಿ ದ್ವಿ ಚಕ್ರ ವಾಹನವನ್ನು ಚಾಲನೆ ಮಾಡಿದ್ದು ಹಾಗೂ ಆತನ ಅಜಾಗರೂಕತೆಯಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ಶರತ್ ಅನ್ನು ಎಷ್ಟು ಅಡಿ ದೂರದಿಂದ ಗಮನಿಸಿದ್ದೀರಾ ಎಂದರೆ ಸಾಕ್ಷಿಯು ಅವನು ದ್ವಿ ಚಕ್ರ ವಾಹನದಿಂದ ಬಿದ್ದ ಕೂಡಲೇ ನಾನು ಅವನ ಬಳಿ ಹೋಗಿ ನೋಡಿರುತ್ತೇನೆ. ಅಲ್ಲಿಯವರೆಗೆ ಆ ದ್ವಿ ಚಕ್ರ ವಾಹನದ ಸವಾರ ಶರತ್ ಎಂದು ಗೊತ್ತಿರಲಿಲ್ಲವಾ ಎಂದರೆ ಸಾಕ್ಷಿ ನಾನು ಅಲ್ಲಿ ಹೋಗಿ ನೋಡಿದಾಗ ಅದು ಶರತ್ ಎಂದು ಗೊತ್ತಾಯಿತು. ಆ ದಿನ ಘಟನಾದಂದು ನಾನು ಬೆಟ್ಟತ್ತೂರು ಗ್ರಾಮದಿಂದ ಸಂಪಾಜೆ ರಸ್ತೆಗೆ ಬರುತ್ತಿದ್ದೆ. ಘಟನಾ ದಿನದಂದು ನಾನು ಸಂಪಾಜೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಎಲ್ಲೋ ಗೇಟ್ ಕಾಫಿ ಶಾಪ್ ಅಪಘಾತ ಸ್ಥಳದಿಂದ 200 ಅಡಿ ದೂರದಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಎಲ್ಲೋ ಗೇಟ್ ಕಾಫಿ ಶಾಪಿನಲ್ಲಿದ್ದ ಜನರು ಅಪಘಾತ ಸ್ಥಳಕ್ಕೆ ಬಂದಿದ್ದರಾ ಎಂದರೆ ಸಾಕ್ಷಿಯು ನನಗೆ ಅವರು ಯಾರು ಎಂದು ನನಗೆ ಗೊತ್ತಿಲ್ಲ, ಅಲ್ಲಿ ಬಹಳ ಜನ ನೆರೆದಿದ್ದರು, ನಾನು ಅಷ್ಟಾಗಿ ಗಮನಿಸಲಿಲ್ಲ. ಕಾರು ಅಚಾನಕ್ಕಾಗಿ ಬ್ರೇಕ್ ಹಾಕಿತ್ತು ಎಂದು ಹೇಳಿದ್ದೀರಿ ಸದರಿ ಕಾರಿನ ಟಯರ್ ಮಾರ್ಕ್ ರಸ್ತೆಯಲ್ಲಿ ಇದ್ದುದನ್ನು ನೀವು ಗಮನಿಸಿದ್ದಿರಾ ಎಂದರೆ ಸಾಕ್ಷಿ ನಾನು ಅಷ್ಟಾಗಿ ಗಮನಿಸಿಲ್ಲ ಎನ್ನುತ್ತಾರೆ. ಸದರಿ ಶರತ್ ಎಷ್ಟು ವೇಗದಲ್ಲಿ ತನ್ನ ಬೈಕನ್ನು ಚಾಲನೆ ಮಾಡುತ್ತಿದ್ದರು ಎಂದು ಹೇಳಬಲ್ಲಿರಾ ಎಂದರೆ ಸಾಕ್ಷಿಯು ಸುಮಾರು 40 ರಿಂದ 45 ಕಿ ಮೀ ಸ್ಪೀಡ್ ನಲ್ಲಿ ಇದ್ದ ಎನ್ನುತ್ತಾರೆ. ಕಾರು ಮತ್ತು ಲಾರಿ ಒಂದೇ ಸ್ಪೀಡ್ ನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಮೃತ ಶರತ್ ನ ಸಂಬಂಧಿಯಾಗಿದ್ದು, ನಾನು ಘಟನಾಸ್ಥಳದಲ್ಲಿ ಇಲ್ಲದಿದ್ದರೂ ಕೂಡ, ಮೃತ ಶರತ್ ನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ನಾನು ಅವನ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾರು ಮತ್ತು ಲಾರಿ ಸರಿಯಾದ ದಿಕ್ಕಿನಲ್ಲಿ ಚಾಲನೆ ಮಾಡಿಕೊಂಡು ಬರುತ್ತಿತ್ತು ಎಂದರೆ ಸರಿ. ಶರತ್ ಅತೀಯಾಗಿ ಮದ್ಯಪಾನ ಮಾಡಿ, ಚಾಲನ ಪರವಾನಗಿ

ಇಲ್ಲದೆ, ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿ , ಎರಡೂ ವಾಹನಗಳ ಮಧ್ಯೆ ಇದ್ದ ಜಾಗದಲ್ಲಿ ನುಗ್ಗಿಸಿಕೊಂಡು ಹೋಗಿ ಅಪಘಾತ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನೀವು ಮಹಜರಿಗೆ ಹೋಗಿದ್ದಾಗ ಅಪಘಾತ ಸ್ಥಳದಲ್ಲಿ ಬ್ರೇಕ್ ಲೈಟ್ ಎಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿಯು ಅಪಘಾತ ಸ್ಥಳದಿಂದ ಅದನ್ನು ನಾನು ಹೋಗುವ ವೇಳೆಗೆ ತೆಗೆದಿದ್ದರು. ಮು . ಮಾ. 1 ರಿಂದ 4 ನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.